# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

14

ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 7/1/21

### ಲವ್ ಜಿಹಾದ್ ತಡೆ ಕಾಯಿದೆ ಸಿಂಧುತ್ವ ಪರಿಶೀಲನೆಗೆ ಕೋರ್ಟ್ ಸಮ್ಮತಿ



**ಹೊಸದಿಲ್ಲಿ:** ಲವ್ ಜಿಹಾದ್‌ನಂತಹ ಸಂಚಿನ ಮದುವೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಉತ್ತರಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಜಾರಿಗೊಳಿಸಿರುವ ನೂತನ ಕಠಿಣ ಕಾಯಿದೆಗಳ ಸಿಂಧುತ್ವ ಪರಿಶೀಲನೆಗೆ ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದೆ. ಇದೇ ವೇಳೆ ಕಾಯಿದೆಗಳ ವಿವಾದಾತ್ಮಕ ನಿಯಮಗಳಿಗೆ ತಡೆ ವಿಧಿಸಲು ನಿರಾಕರಿಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ನೇತೃತ್ವದ ನ್ಯಾಯಪೀಠ, ಸಿಂಧುತ್ವ ಕುರಿತ ವಿಚಾರಣೆಗೆ ಮಾತ್ರ ಸಮ್ಮತಿಸಿ ಎರಡು ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಿತು. ಉತ್ತರಪ್ರದೇಶದಲ್ಲಿ ಜಾರಿಯಿರುವ ಅಕ್ರಮ ಧಾರ್ಮಿಕ ಮತಾಂತರ ತಡೆ ಕಾಯಿದೆ ಸುಗ್ರೀವಾಜ್ಞೆ ಮತ್ತು ಉತ್ತರಾಖಂಡದಲ್ಲಿ ಅಸ್ತಿತ್ವದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯ ಕಾಯಿದೆ-2018ರ ಸಿಂಧುತ್ವ ಪ್ರಶ್ನಿಸಿ ವಕೀಲ ವಿಶಾಲ್ ಠಾಕ್ರೆ ಮತ್ತಿತರರು ಮತ್ತು ಸಿಟಿಜನ್ ಫಾರ್ ಜಸ್ಟಿಸ್ ಆಂಡ್ ಪೀಸ್ ಎನ್‌ಜಿಒ ತಕರಾರು ಅರ್ಜಿ ಸಲ್ಲಿಸಿದ್ದರು. ''ಅಂತರ್ ಧರ್ಮೀಯ ಜೋಡಿ ಪರಸ್ಪರ ಮೆಚ್ಚಿ ಮದುವೆಯಾಗುವುದನ್ನು ಅಪರಾಧ ಎಂದು ಪರಿಗಣಿಸುವುದು ಹಾಸ್ಯಾಸ್ಪದ. ಇದು ಅಪಾಯಕಾರಿಯೂ ಹೌದು. ಇದರ ವಿವಾದಾತ್ಮಕ ನಿಯಮಗಳಿಗೆ ತಕ್ಷಣ ತಡೆ ವಿಧಿಸಬೇಕು,'' ಎಂದು ಅರ್ಜಿದಾರರ ಪರ ವಕೀಲ ಸಿ.ಯು. ಸಿಂಗ್ ವಾದಿಸಿದರು. ಅವರ ವಾದದ ಭಾಗಶಃ ಸಂಗತಿಗಳನ್ನು ಒಪ್ಪಿದ ಕೋರ್ಟ್ ರಾಜ್ಯ ಸರಕಾರಗಳಿಗೆ ನೋಟಿಸ್ ನೀಡಿ, ತಡೆ ಮನವಿಯನ್ನು ತಳ್ಳಿಹಾಕಿತು.